**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ **284/2017**

ಸಿ.ಡಬ್ಲ್ಯೂ –27 ಪಿ.ಡಬ್ಲ್ಯೂ -7

| | | |
|---|---|---|
| ಹೆಸರು | ಃ | ರಾಜನಂದಿನಿ |
| ತಂದೆಃಗಂಡ | ಃ | ರಾಜೇಂದ್ರ |
| ವಯಸ್ಸು | ಃ | ೧೬ ವರ್ಷ |
| ಉದ್ಯೋಗ | : | ವಿದ್ಯಾರ್ಥಿನಿ |
| ವಾಸಸ್ಥಳ | ಃ | ಕನಗರ |

ದಿನಾಂಕಃ೨೭-೦೧-೨೦೨೧

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಚಾಸಾ-1 ನನ್ನ ಮಾವ. ಚಸಾ-17,19,20,21,27,28 ರವರ ಪರಿಚಯವಿರುತ್ತದೇ. ಈ ಪ್ರಕರಣದಲ್ಲಿನ ಮೃತ 9 ಜನರ ಪರಿಚಯ ಇರುತ್ತದೆ. ಆರೋಪಿ ನನಗೆ ಗೊತ್ತಿಲ್ಲ.

ನಾವು ದಿನಾಂಕ 19-07-2016 ರಂದು ದೇವರ ದರ್ಶನಕ್ಕಾಗಿ ಕ ನಗರದಿಂದ ಗಾಣಗಾಪೂರಕ್ಕೆ ಹೋಗುತ್ತಿದ್ದೇವು. ನಾನು ಕ್ರೂಸರನಲ್ಲಿ ಹೋಗುತ್ತಿದ್ದೇವು. ಎಂ.ಹೆಚ್ 12-7368 ಎಂಬ ಲಾರಿ ವೇಗವಾಗಿ ಅಡ್ಡದಿಡ್ಡಿಯಾಗಿ ಬಂದು ನಮಗೆ ಡಿಕ್ಕಿಪಡಿಸಿರುತ್ತದೆ. ಲಾರಿಯ ಚಾಲಕನ ತಪ್ಪಿನಿಂದ ಸದರಿ ಅಪಘಾತವಾಗಿದೆ. ಸದರಿ ಲಾರಿಯನ್ನು ಯಾರು ಚಲಾಯಿಸುತ್ತಿದ್ದರು ಎಂಲದು ನನನೆ ಗೊತ್ತಿಲ್ಲ. ಲಾರಿಯ ಚಾಲಕನ ತಪ್ಪಿನಿಂದ ಸದರಿ ಅಪಘಾತವಾಗಿದೆ. ಸದರಿ ಅಪಘಾತದಲ್ಲಿ ನನ್ನ ಕಾಲಿಗೆ ಗಾಯವಾಗಿದೆ. ತಲೆಗೆ ಕೈಗೆ ಮತ್ತು ಕಾಲಿಗೆ ಗಾಯವಾಗಿದೆ. ಘಟನೆಯ ನಂತರ ನನಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ಅಪಘಾತದಲ್ಲಿ 9 ಜನರು ತೀರಿಕೊಂಡಿದ್ದಾರೆ.

(ಈ ಹಂತದಲ್ಲಿ ಸ.ಸ.ಅ ರವರು ಭಾಗಶಃ ಪ್ರತಿಕೂಲ ಸಾಕ್ಷಿಯನ್ನು ಪರಿಗಣಿಸಬೇಕೆಂದು ಕೇಳಿಕೊಂಡ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿಸಲಾಯಿತು)

**<u>ಪಾಟೀ ಸವಾಲು ಮಾನ್ಯ ಸಸಅ ಅವರಿಂದಃ</u>**

ಮೃತ ವರ್ಷ ದೊಂಗಳೆ ನನ್ನ ಮಾಮಿ. ಅವರು ಈ ಅಪಘಾತದಲ್ಲಿ ಮೃತಪಟ್ಟಿರುತ್ತಾರೆ. ಸ್ವಪ್ನಿಲ ಡೊಬಳೆ ಸಂಜಯ ಇಂಗಳೆ, ಸರೋಜಾಬಾಯಿ, ಕಾಂತಾಬಾಯಿ, ಗಜಾಬಾಯಿ, ಕೃಷ್ಣ, ಫೂಲಚಂದ ಇವರು ಸದರಿ ಅಪಘಾತದಲ್ಲಿ ಮೃತಪಟ್ಟಿರುತ್ತಾರೆ. ಅಪಘಾತಪಡಿಸಿದ ಲಾರಿಯ ಸಂಖ್ಯೆ ಎಂ ಹೆಚ್ ೧೨ ಎಲ್ ಟಿ ೭೩೬೮ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ಹೆಸರು ಸಂಜಯ ಎಂದರೆ ಸರಿ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ ಆರ್ ಜೆ ಪಿ  ವಕೀಲರಿಂದ</u>**

ನಾನು ಕ್ರೂಸರನಲ್ಲಿ ಹಿಂದುಗಡೆ ಕುಳಿತಿದ್ದೇ ಎಂದರೆ ಸರಿ. ಎದುರುಗಡೆ ರಸ್ತೆ ಕಾಣುತ್ತಿರಲಿಲ್ಲ. ಎದುರುಗಡಗೆ ಬರುವ ಗಾಡಿಯೂ ಸಹ ನನಗೆ ಕಾಣುತ್ತಿರಲಿಲ್ಲ. ಎದುರುಗಡೆಯ ಲಾರಿ ನನ್ನ ಎಡಬದಿಯಲ್ಲಿ ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಎದುರುಗಡೆಯ ಲಾರಿಯ ಚಾಲಕನ ತಪ್ಪು ಇಲ್ಲ ಎಂದರೆ ಸರಿಯಲ್ಲ. ಅಲ್ಲಿನ ರಸ್ತೆ ಎಲ್ಲಾ ಕಾಲದಲ್ಲಿ ತೀರುವು ಇದೆ ಎಂದರೆ ಸರಿ. ನಮ್ಮ ವಾಹನದಲ್ಲಿ ಬಹಳ ಜನ ಇದ್ದುದರಿಂದ ಆಯಾ ತಪ್ಪಿ ನಮ್ಮ ವಾಹನದ ಚಾಲಕ ಎದುರುಗಡೆ ವಾಹನಕ್ಕೆ ಡಿಕ್ಕಿಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಲಾರಿ ಚಾಲಕನ ಯಾವುದೇ ತಪ್ಪು ಇಲ್ಲ ಎಂದರೆ ಸರಿಯಲ್ಲ. ಲಾರಿ ನಿಧಾನವಾಗಿ ಚಲಿಸುತ್ತಿತ್ತು ಎಂಲದರೆ ಸರಿಯಲ್ಲ. ಪರಿಹಾರಕ್ಕಾಗಿ ಉಸ್ಮಾನಬಾದ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ.

**<u>ಮರು ವಿಚಾರಣೆಃ</u>** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.